## ಪ್ರಾರ್ಥನೆ

ಬಾಲ್ಯಾದಿಷ್ವಪಿ ಜಾಗ್ರದಾದಿಷು ತಥಾ
ಸರ್ವಾಸ್ವವಸ್ಥಾಸ್ವಪಿ
ವ್ಯಾವೃತ್ತಾಸ್ವನುವರ್ತಮಾನಮಹಮಿ-
ತ್ಯಂತಸ್ಸ್ಫುರಂತಂ ಸದಾ ।
ಸ್ವಾತ್ಮಾನಂ ಪ್ರಕಟೀಕರೋತಿ ಭಜತಾಂ
ಯೋ ಮುದ್ರಯಾ ಭದ್ರಯಾ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ
ಶ್ರೀದಕ್ಷಿಣಾಮೂರ್ತಯೇ ॥

ಬಾಲ್ಯ-ಯೌವನ-ಮುಪ್ಪುಗಳು, ಜಾಗ್ರತ್-ಸ್ವಪ್ನ-ನಿದ್ರಾದಿಗಳು ಮತ್ತು ಇತರ ಎಲ್ಲ ಅವಸ್ಥೆಗಳು ಬಂದು ಹೋದರೂ, ನಿತ್ಯವಾಗಿ ಉಳಿದುಕೊಂಡಿರುವ ಮತ್ತು 'ನಾನು' ಎಂದು ಒಳಗೆ ಸದಾ ಪ್ರಕಾಶಿಸುತ್ತಿರುವ ಆತ್ಮನನ್ನು ಯಾವಾತನು ತನ್ನ ಮಂಗಳವಾದ ಮುದ್ರೆಯಿಂದ ಶಿಷ್ಯರಿಗೆ ಪ್ರಕಟಿಸುವನೊ ಅಂತಹ ಶ್ರೀಗುರು ಸ್ವರೂಪನಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ಓಂ ನಮಃ ಪ್ರಣವಾರ್ಥಾಯ
ಶುದ್ಧಜ್ಞಾನೈಕಮೂರ್ತಯೇ ।
ನಿರ್ಮಲಾಯ ಪ್ರಶಾಂತಾಯ
ದಕ್ಷಿಣಾಮೂರ್ತಯೇ ನಮಃ ॥

ಪ್ರಣವದ ವಾಚ್ಯನೂ, ಶುದ್ಧಜ್ಞಾನದ ಮೂರ್ತಿಯೂ, ನಿರ್ಮಲನೂ, ಪ್ರಶಾಂತನೂ ಆದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ನಿಧಯೇ ಸರ್ವವಿದ್ಯಾನಾಂ
ಭಿಷಜೇ ಭವರೋಗಿಣಾಮ್ ।
ಗುರವೇ ಸರ್ವಲೋಕಾನಾಂ
ದಕ್ಷಿಣಾಮೂರ್ತಯೇ ನಮಃ ॥

ಸಮಸ್ತ ವಿದ್ಯೆಗಳಿಗೆ ನಿಧಿಯೂ, ಭವರೋಗಕ್ಕೆ ವೈದ್ಯನೂ, ಸಮಸ್ತ ಲೋಕಕ್ಕೂ ಗುರುವೂ ಆದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

## ಸೂಕ್ತಿಪ್ರಭ

ಆರೋಗ್ಯವೇ ಪರಮ ಭಾಗ್ಯ, ತೃಪ್ತಿಯೇ ಪರಮ ಧರ್ಮ, ವಿಶ್ವಾಸವೇ ಪರಮ ಬಂಧು, ಮನ ಶ್ಶಾಂತಿಯೇ ಪರಮ ಸುಖ.

—ಭಗವಾನ್ ಬುದ್ಧ

ನೀವು ಏನನ್ನೊ ಮಾಡುವುದಕ್ಕೆ ಮುಂಚೆ ನೀವು ಏನಾದರೂ ಆಗಿರಬೇಕು.

—ಗೋಥೆ

ಜನ ಏನು ಬೇಕಾದರೂ ಹೇಳಲಿ, ನಿನ್ನ ನಂಬಿಕೆ ಯನ್ನು ಕಳೆದುಕೊಳ್ಳಬೇಡ. ಆಗ ಜಗತ್ತೇ ನಿನ್ನ ಪದತಲದಲ್ಲಿ ಬಂದು ಬೀಳುತ್ತದೆ.

—ಸ್ವಾಮಿ ವಿವೇಕಾನಂದ

ನೀವು ಮಾನವನಿಗೆ ಏನನ್ನೂ ಕಲಿಸಲಾರಿರಿ. ಅವನು ಅದನ್ನು ತನ್ನೊಳಗೇ ಕಂಡುಕೊಳ್ಳಲು ಅವನಿಗೆ ನೆರವಾಗಬಲ್ಲಿರಿ.

—ಗೆಲಿಲಿಯೊ

ನಿಮ್ಮ ಆಲೋಚನೆಗಳನ್ನು ಬದಲಾಯಿಸಿ, ಆಗ ನಿಮ್ಮ ಜಗತ್ತೂ ಬದಲಾಗುತ್ತದೆ.

—ನಾರ್ಮನ್ ವಿಂಸೆಂಟ್ ಪೀಲ್

ರಥ ಕುದುರೆ ಪರಸ್ಪರ ಬಿಟ್ಟು ಇರಲಾರವು. ಹಾಗೆಯೇ ವಿದ್ಯೆ ಆಚರಣೆಗಳನ್ನು ಬೇರೆ ಮಾಡ ಲಾಗದು.

—ಸುಭಾಷಿತ

ಮನುಷ್ಯಪ್ರಯತ್ನವಿಲ್ಲದೆ ಯಾವುದೂ ಸಾಧ್ಯ ವಿಲ್ಲ. ಅನ್ನ ಇರಬಹುದು, ಅದನ್ನು ಕೈ ಬಾಯಿಗೆ ಕೊಂಡೊಯ್ಯಬೇಕಲ್ಲ!

—ಸುಭಾಷಿತ

ವಿನಯವೆಂಬ ರತ್ನಕಿರೀಟ, ಶಾಸ್ತ್ರಜ್ಞಾನವೆಂಬ ಕರ್ಣಕುಂಡಲ, ತ್ಯಾಗವೆಂಬ ಕಂಕಣ ಉಳ್ಳವನಿಗೆ ಇತರ ಜಡ ಒಡವೆಗಳು ಏಕೆ?

—ಸುಭಾಷಿತ